# ಕ್ರಿಸ್‌ಮಸ್‌ನಲ್ಲಿ ಲಂಡನ್ ದೀಪಾಲಂಕಾರದ ವೈಭವ

ಅಲಂಕರಿಸಿರುವ ಕ್ರಿಸ್‌ಮಸ್ ಲೈಟನ್ನು ತೋರಿಸು ಅಪ್ಪಾ' ಎಂದು ದುಂಬಾಲುಗರೆದಿದ್ದಳು ಈ ಬಾಲೆ. 'ಆಸ್ಪತ್ರೆಯಿಂದ ಸೀದಾ ಇಲ್ಲಿಗೇ ಬಂದಿದ್ದು ಎಷ್ಟು ಒಳ್ಳೆಯದಾಯಿತು' ಎಂದು ಈಗಾಗಲೇ ಮೂರು ಬಾರಿ ಅಪ್ಪನಲ್ಲಿ ಹೇಳಿದ್ದಾಳೆ.

ಗಾಲಿಕುರ್ಚಿಯನ್ನೇ ಮನೆ ಮಾಡಿಕೊಂಡಂತೆ ಹಾಯಾಗಿ ಕೂತ ಸಿಯಾನಾಳ ತಲೆ ನೇವರಿಸುತ್ತಿವೆ ಅಪ್ಪನ ಕೈ. ಸುಸ್ತಾಗಿರುವ ನೆಪ ಹೇಳಿ ಮನೆಗೆ ಕರೆ ತಂದಿದ್ದರೆ ಮಗಳ ಮುಖದಲ್ಲಿನ ಈ ನಗೆ ಮಿಂಚನ್ನು ಕಾಣಲು ಸಾಧ್ಯವಿರಲಿಲ್ಲ ಎಂದು ಅಪ್ಪನೂ ಮನದಲ್ಲಿ ಖುಷಿಪಡುತ್ತಿದ್ದಾನೆ. 'ಕ್ರಿಸ್‌ಮಸ್ ಲೈಟುಗಳನ್ನು ವರ್ಷ ಪೂರ್ತಿ ಇಡಬಾರದ ಇವರು...? ವರ್ಷಕ್ಕೆ ಮೂರು ಬಾರಿ ಆಸ್ಪತ್ರೆ ವಾಸ ಮುಗಿದ ಮೇಲೂ ಇಲ್ಲಿ ಬರುವಂತಿದ್ದರೆ ನಾನು ಔಷಧ, ಡಾಕ್ಟರುಗಳು ಬೇಡವೆಂದು ರಗಳೆ ತೆಗೆಯುತ್ತಲೇ ಇರಲಿಲ್ಲ' ಎನ್ನುತ್ತ ಜೋರು ನಗುತ್ತಾಳೆ ಸಿಯಾನಾ. ಮಗಳ ನೋಟ ತಪ್ಪಿಸಿ ತನ್ನ ಕಣ್ಣುದ್ದಿಕೊಂಡ ಅಪ್ಪ, ದೂರದ ಕ್ರಿಸ್‌ಮಸ್ ಮರದ ತುದಿಯ ನಕ್ಷತ್ರವನ್ನು ದೀನನಾಗಿ ನೋಡುತ್ತಾನೆ. ಈ ಕ್ರಿಸ್‌ಮಸ್ ದೀಪಾಲಂಕಾರ, ಜೀವನ ಪ್ರೀತಿಯನ್ನು ಉಕ್ಕಿಸಿದ ಬಗೆ ನೋಡಿ ಮತ್ತೆ ಮತ್ತೆ ಅಚ್ಚರಿಗೊಳ್ಳುತ್ತಾನೆ.

**ಕಥೆ ಹೇಳುವ ದೀಪಗಳು:** ಕಳೆದ ಹದಿಮೂರು ವರ್ಷಗಳಿಂದ ಲಂಡನ್ನಿನ ಬೀದಿಗಳಲ್ಲಿ ಟ್ಯಾಕ್ಸಿ ಓಡಿಸುತ್ತಿರುವ ಆರ್ಥರ್, ಕ್ರಿಸ್‌ಮಸ್ ದೀಪಾಲಂಕಾರವನ್ನು ನೋಡುವುದೇ ತನ್ನ ಕಾರಿನ ಕನ್ನಡಿಯಲ್ಲಂತೆ. ದೂರದ ಊರುಗಳಿಂದ ಲಂಡನ್ನಿನ ದೀಪಗಳನ್ನು ನೋಡಲು ಬರುವ ಪ್ರಯಾಣಿಕರನ್ನು ಕಂಡರೆ ಆರ್ಥರ್‌ಗೆ ಒಂದು ಬೊಗಸೆ ಜಾಸ್ತಿ ಆದರ. ಇಲ್ಲಿ ಬರುವ ಜನ, ಈ ಅಲಂಕಾರವನ್ನು ದಿಟ್ಟಿಸುವ ಬಗೆಯಿಂದಲೇ ಅವರ ಮನವನ್ನು ಅರ್ಥ ಮಾಡಿಕೊಳ್ಳಬಹುದು ಅನ್ನುತ್ತಾನೆ ಆರ್ಥರ್.

ಕಾಲೇಜಿನಲ್ಲಿ ಈಗ ತಾನೇ ಸಂಪಾದಿಸಿರುವ ಗೆಳೆಯರ ಹಿಂಡಿನೊಂದಿಗೆ ಮೊದಲ ಬಾರಿ ದೀಪ ನೋಡಲು ಬಂದಿರುವ ಹುಡುಗಿ, ತಾಸೆರಡು ಕಾದ ಗಂಡ, ಆಗಷ್ಟೇ ಆಫೀಸು ಮುಗಿಸಿ ಲಗುಬಗೆಯಿಂದ ಗಂಡನ ಸೇರಿಕೊಂಡ ಮಡದಿ, ಥೇಮ್ಸ್ ನದಿಯಲ್ಲಿ ಪ್ರತಿಫಲಿಸುತ್ತಿರುವ ಕಿತ್ತಳೆ ಬಣ್ಣದ ದೀಪವನ್ನು ಕಣ್ಣಿನಲ್ಲೇ ಕುಡಿಯುತ್ತಿರುವ ಕ್ಯಾರಮೆಲ್ ಪಾಪ್‌ಕಾರ್ನ್ ತಳ್ಳುಗಾಡಿಯ ಮಾಲೀಕ, ದಿನವಿಡೀ ಮ್ಯೂಸಿಯಮ್ಮಿನಲ್ಲಿ ಹತ್ತಾರು ತರಹದ ಕಾರ್ಯ ನಿರ್ವಹಿಸಿದ ದಣಿವು ಸುಧಾರಿಸಿಕೊಳ್ಳಲೆಂದೇ ಸಾಲು ದೀಪಗಳನ್ನು ದಿಟ್ಟಿಸುತ್ತಿರುವ ಮಹಿಳೆ, ದೀಪಗಳನ್ನು ನೋಡುವ ಹೆಳೆಯಲ್ಲಿ, ಚಾಕೊಲೇಟ್ ಸಿರಪ್ಪಿನಲ್ಲಿ ತಲೆಸ್ನಾನ ಮಾಡಿದ ಸ್ಟ್ರಾಬೆರಿಗಳನ್ನು ತಿನ್ನಲೆಂದು ಬಂದ ಪುಟಾಣಿ... ಹೀಗೆಯೇ ಮುಂದುವರೆಯುವ ಪಟ್ಟಿ.

ಈ ಸಂಭ್ರಮವನ್ನೆಲ್ಲ ತನ್ನದೇ ಧಾಟಿಯಲ್ಲಿ ಅರ್ಥೈಸಿಕೊಳ್ಳುವ ಆರ್ಥರ್. ಪ್ರತೀ ಕ್ರಿಸ್‌ಮಸ್ ಮುಗಿದ ನಂತರವೂ ತನ್ನ ಮನದ ಕೋಶದಲ್ಲಿ ಹತ್ತಾರು ಕಥೆಗಳನ್ನು ಹೊಸದಾಗಿ ಜೋಡಿಸಿಕೊಳ್ಳುತ್ತೇನೆ ಎನ್ನುವ ಆರ್ಥರ್, ಕ್ರಿಸ್‌ಮಸ್ ಸಮಯದಲ್ಲಿ ಲಂಡನ್ನಿನ ಆಚೀಚೆ ಕೂಡ ಹಂದಾಡುವುದಿಲ್ಲವಂತೆ.

## ಬದುಕು ಬೆಳಗುವ ದೀಪಾಲಂಕಾರ

ಪ್ರತಿವರ್ಷ ಈ ಕ್ರಿಸ್‌ಮಸ್ ದೀಪಗಳನ್ನು ಬೆಳಗುವುದು ದೊಡ್ಡ ಕಾರ್ಯಕ್ರಮ. ಆರು ತಿಂಗಳ ಮೊದಲೇ ಕಾರ್ಯಕ್ರಮದ ವೇಳಾಪಟ್ಟಿಯನ್ನು ವಿವಿಧ ಮಾಧ್ಯಮಗಳಲ್ಲಿ ಬಿತ್ತರಿಸುತ್ತಾರೆ. 'ಇಂತಹ ದಿನ, ಇಂತಹ ಹೊತ್ತಿಗೆ, ಇಂತಹ ಸೆಲೆಬ್ರಿಟಿಗಳು ದೀಪ ಬೆಳಗುತ್ತಾರೆ' ಎಂದು ಸರ್ಕಾರಿ ಸಂಸ್ಥೆಗಳು ಘೋಷಿಸುತ್ತವೆ. ಸಾವಿರಾರು ಜನರು ಸೇರುವ ಆ ಹೊತ್ತಿನಲ್ಲಿ ಅನೇಕ ಹಾಡುಗಾರರು, ಕಲಾವಿದರು ಕಾರ್ಯಕ್ರಮ ಕೊಡುತ್ತಾರೆ. ಈ ಕಾರ್ಯಕ್ರಮದಿಂದ ಸಂಗ್ರಹವಾದ ಹಣವೆಲ್ಲವೂ ಚ್ಯಾರಿಟಿ ಸಂಸ್ಥೆಗಳಿಗೆ ತಲುಪುತ್ತದೆ.

## ಚಳಿಗಾಲದ ಪ್ರಮುಖ ಆಕರ್ಷಣೆ

ಯುನೈಟೆಡ್ ಕಿಂಗ್‌ಡಮ್‌ನ ರಾಜಧಾನಿ ಲಂಡನ್‌ನ ಕ್ರಿಸ್‌ಮಸ್ ಲೈಟುಗಳಿಗೆ ಬಲವಾದ ಇತಿಹಾಸವಿದೆ. ಕ್ರಿಸ್‌ಮಸ್ ಸಮಯದಲ್ಲಿ ಜಗಮಗಿಸುವ ಈ ದೀಪಗಳ ಕುರಿತು ಹಲವಾರು ಕಥೆಗಳು, ಕೆಲವು ದಂತಕಥೆಗಳೂ ಇವೆ. ಎರಡನೇ ಮಹಾಯುದ್ಧದಿಂದ ಇಡೀ ದೇಶ ಕಂಗೆಟ್ಟ ಸಂದರ್ಭದಲ್ಲಿ ಆರಂಭವಾದದ್ದು ಈ ಕ್ರಿಸ್‌ಮಸ್ ದೀಪಾಲಂಕಾರ. ಮಹಾಯುದ್ಧದ ಪರಿಣಾಮವಾಗಿ ಮನೆಯಲ್ಲಿಯೇ ಕುಳಿತ ಜನರನ್ನು ಅಂಗಡಿ ಮುಂಗಟ್ಟುಗಳಿಗೆ ಕರೆತರುವಲ್ಲಿ ಈ ದೀಪಗಳು ಸಹಾಯ ಮಾಡಿದ್ದವು ಎಂದು ಇಂಗ್ಲೆಂಡಿನ ಇತಿಹಾಸ ಹೇಳುತ್ತದೆ. 1950ರ ಸುಮಾರಿಗೆ ಮೊದಲು ರೀಜೆಂಟ್ ಸ್ಟ್ರೀಟ್ ಹಾಗೂ ಆಕ್ಸ್‌ಫರ್ಡ್ ಸ್ಟ್ರೀಟ್‌ನಲ್ಲಿ ಈ ದೀಪಾಲಂಕಾರ ಆರಂಭವಾಯಿತು. ದೀಪಗಳನ್ನು ನೋಡಲು ದೇಶದ ಎಲ್ಲೆಡೆಯಿಂದ ಜನರು ಬರತೊಡಗಿದಾಗ ಲಂಡನ್‌ನ ಎಲ್ಲಾ ಪ್ರಮುಖ ಬೀದಿಗಳು ಡಿಸೆಂಬರ್ ತಿಂಗಳಲ್ಲಿ ತರಹೇವಾರಿ ಲೈಟುಗಳಿಂದ ಸಿಂಗಾರಗೊಳ್ಳತೊಡಗಿದವು. ಇಂದು, ಲಂಡನ್‌ನ ಈ ದೀಪಾಲಂಕಾರ ಚಳಿಗಾಲದ ಪ್ರಮುಖ ಆಕರ್ಷಣೆ.



